ESI.A.No. 57/2022

AW-1,

ದಿನಾಂಕಃ 07-07-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ- ಎದುರುದಾರರ ಪರವಾಗಿಃ ಶ್ರೀ. ಎಬಿಎನ್ ವಕೀಲರಿಂದ ಃ

ನನ್ನ ಸಂಸ್ಥೆ 2015 ರಿಂದ ಇಎಸ್ಐ ವ್ಯಾಪ್ತಿಯಲ್ಲಿದೆ. 01.08.2018 ರಿಂದ 31.03.2021 ರವರಗೆ ವಂತಿಗೆಯನ್ನು ನೀಡಿರುವುದಿಲ್ಲ ಎಂದು ಎದುರುದಾರರು ನೋಟೀಸನ್ನು ನೀಡಿರುತ್ತಾರೆ ಎಂದರೆ ಸರಿ . ಸದರಿ ನೋಟೀಸಿನಲ್ಲಿ ಖುದ್ದು ಸುನಾವಣೆಗೆ ಹಾಜರಾಗಲು ಸೂಚಿಸಿದ್ದರೂ ಸಹ ಹಾಜರಾಗದೇ ಇದ್ದುದ್ದರಿಂದ ಎದುರುದಾರರು ಮತ್ತೊಂದು ನೋಟೀಸನ್ನು ನೀಡಿರುತ್ತಾರೆ ಎಂಬ ಸೂಚನೆಗೆ ಮೊದಲನೆಯ ನೋಟಿಸ್ ತಲುಪಿದ ನಂತರ ಖುದ್ದು ಸುನಾವಣೆಗೆ ಹಾಜರಾಗಿರುವುದಿಲ್ಲ ನಂತರ ಸಂಸ್ಥೆಯು ಮುಚ್ಚಿದ್ದರಿಂದ ಮತ್ತೊಂದು ನೋಟಿಸ್ ತಲುಪಿರುವುದಿಲ್ಲ. 2018 ರಲ್ಲಿ ನಮ್ಮ ಸಂಸ್ಥೆಯು ಮುಚ್ಚಿದ ನಂತರ ಎದುರುದಾರರಿಗೆ ಮಾಹಿತಿಯನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ . ಸದರಿ ಕ್ಲೋಷರ್ ನೋಟೀಸನ್ನು ನಾನು ಈ ನ್ಯಾಯಾಧೀಕರಣದ ಮುಂದೆ ಹಾಜರು ಪಡಿಸಿರುತ್ತೇನೆ. ಈ ನ್ಯಾಯಾಧೀಕರಣ ಹಾಜರು ಪಡಿಸಿದ ಕ್ಲೋಷರ್ ನೋಟೀಸ್ ನಿ ಎ -3 ಆಗಿದ್ದು ಅದನ್ನು 10.12.2021 ರಂದು ಎದುರುದಾರರು ನೀಡಿರುತ್ತೇನೆ ಎಂದರೆ ಸರಿ . ಕ್ಲೋಷರ್ ನೋಟಿಸ ನ್ನು ನಾನು 2018 ರಲ್ಲಿ ಎದುರುದಾರರಿಗೆ ನೀಡಿರುವುದಿಲ್ಲ, 2021 ರಲ್ಲಿ ನೀಡಿರುತ್ತೇನೆ ಎಂದರೆ ಸರಿ .

2021 ರಲ್ಲಿ ಎದುರುದಾರರು ಖುದ್ದು ಸುನಾವಣೆ ನೋಟೀಸನ್ನು ನೀಡಿದ ನಂತರ ನಿ ಎ -3 ಎದುರುದಾರರಿಗೆ ನೀಡಿರುತ್ತೇನೆ ಎಂದರೆ ಸರಿ . ಸಂಸ್ಥೆಯನ್ನು ಮುಚ್ಚಿದ ಕಾಲಕ್ಕೆ ಕೆಲಸಗಾರರಿಗೆ ನೀಡಿದ ನೋಟಿಸ್ ಮತ್ತು ಸೆಟಲ್ ಮೆಂಟ್ ಸಂಬಂಧಿಸಿದ ದಾಖಲಾತಿಗಳನ್ನು ಈ ನ್ಯಾಯಾಧೀಕರಣದ ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ . ಸಂಸ್ಥೆಯು ಮುಚ್ಚುವ ಕಾಲಕ್ಕೆ ಸಂಸ್ಥೆಯಲ್ಲಿ ಎಷ್ಟು ಕೆಲಸಗಾರರು ಇದ್ದರು ಅವರ ವೇತನ ಎಷ್ಟು ಮತ್ತು ಅವರಿಗೆ ನೀಡಿದ ಕ್ಲೋಷರ್ ಪರಿಹಾರ ಎಷ್ಟು ಎಂಬುದರ ಬಗ್ಗೆ ದಾಖಲಾತಿಗಳನ್ನು ಈ ನ್ಯಾಯಾಧೀಕರಣದ ಮುಂದೆ ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ ಸಾಕ್ಷಿದಾರರು ಮುಂದುವರೆದು ಎದುರುದಾರರ ಸಂಸ್ಥೆ ಗೆ ನೀಡಿರುತ್ತೇನೆ ಎಂದು ನುಡಿದಿರುತ್ತಾರೆ. ವಂತಿಗೆ ನೀಡುವುದನ್ನು ತಪ್ಪಿಸಿಕೊಳ್ಳಲು ಸಂಸ್ಥೆಯು 2018 ರಲ್ಲಿ ಮುಚ್ಚಿರುತ್ತದೆ ಎಂದು 2021 ರಲ್ಲಿ ಖುದ್ದು ಸುನಾವಣೆ ಗೆ ನೋಟೀಸನ್ನು ನೀಡಿದ ಕಾಲಕ್ಕೆ ಎದುರುದಾರರಿಗೆ ತಿಳಿಸಿರುತ್ತೇನೆ ಎಂದರೆ ಸರಿಯಲ್ಲ ಪ್ರಾಫಿಟ್ ಅಂಡ್ ಲಾಸ್ ಸ್ಟೇಟ್ ಮೆಂಟ್ ಮತ್ತು ಬ್ಯಾಲೆನ್ಸ್ ಶೀಟ್ ಗಳನ್ನು ನಾನು ಈ ನ್ಯಾಯಾಧೀಕರಣದ ಮುಂದೆ ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ ಸಾಕ್ಷಿದಾರರು ಮುಂದುವರೆದು ಎದುರುದಾರರ ಸಂಸ್ಥೆ ಗೆ ನೀಡಿರುತ್ತೇನೆ ಎಂದು ನುಡಿದಿರುತ್ತಾರೆ.

ಸಂಸ್ಥೆಯು ಮುಚ್ಚಿದ್ದರ ಬಗ್ಗೆ ಸಂಸ್ಥೆ ಯಲ್ಲಿ ಕೆಲಸ ಮಾಡುತ್ತಿದ್ದ ಕೆಲಸಗಾರರ ಬಗ್ಗೆ ಹಾಗೂ ವೇತನ ನೀಡಿದ್ದರ ಬಗ್ಗೆ ದಾಖಲಾತಿಗಳನ್ನು ನಾನು ಈ ನ್ಯಾಯಾಧೀಕರಣದ ಮುಂದೆ ಹಾಜರುಪಡಿಸದೇ ಇದ್ದುದ್ದರಿಂದ ಎದುರುದಾರರು ಕೇಳಿದ ರೂ. 1,82,483/- ನೀವು ಬಾಧ್ಯಸ್ಥರಾಗಿರುತ್ತೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಗಣಕೀಕರಿಸಲಾಯಿತು.)

(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ , ತಿಳಿಸಿ , ಹೇಳಿದಾಗ ಅವರು ಸರಿ ಇದೆ ಎಂದು ಒಪ್ಪಿದ್ದಾರೆ).

(ಸಂಧ್ಯಾ ರಾವ್ ಪಿ.),
ಅಧ್ಯಕ್ಷಾಧಿಕಾರಿಗಳು/ಜಡ್ಜ್
ಇ.ಎಸ್.ಐ.ನ್ಯಾಯಾಲಯ,
ಮೈಸೂರು.